# ಬಾಷೋನ ಹಾಯ್ಕುಗಳು

ಗಾಳಿಯಿಂದ ಸೀಳಿಹೋದ
ಬಾಳೆಗಿಡ ಮಳೆ ಹನಿಯ
ಚೆಲ್ಲಿದೆ ಬಕೆಟಿನಲ್ಲಿ





ಮಿಂಚನು ಕಂಡಾಗ
ಜೀವನದ ಕ್ಷಣಭಂಗುರತೆ
ಕುರಿತು ಚಿಂತಿಸದಿರು




ವಸಂತದ ಮಳೆ
ಛಾವಣಿಯಿಂದ ಸೋರಿ
ಕಣಜದ ಗೂಡಿಂದ ತೊಟ್ಟಿಕ್ಕಿದೆ

ಬೇಸಿಗೆಯ ಮಳೆಯಲ್ಲಿ
ಹೆಸರಿಲ್ಲದ ತೊರೆಯೂ
ಬೀಭತ್ಸ



ಶೀತಲ ಮಳೆ ಶುರು
ಟೊಪಿ ಇಲ್ಲ–
ಈಗ?



ಬೆಟ್ಟದ ಹಳ್ಳಿಯಲ್ಲಿ
ಕೂಗುವ ಕೋಗಿಲೆ ಕರೆಯುವೆ ಯಾರನು?
ನೀನು ಏಕಾಂಗಿ ಅಂದುಕೊಂಡಿದ್ದೆ



ಮಳೆಗಾಲ
ಗೋಡೆಯ ಮೇಲಿದೆ
ಅಂಟಿಸಿಟ್ಟ ಕವಿತೆಯ ಕುರುಹು



● ಮೂಲ : ಬಾಷೋ, ಕನ್ನಡಕ್ಕೆ : ಡಾವೆಂಕಿ

ಚಿತ್ರಗಳು: ವೆಂಕಟ್ರಮಣ ಭಟ್